# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆಮ್ ಆದ್ಮಿ ಬೀಮಾ ಯೋಜನೆಯಡಿ ವಿವಿಧ ಕಸುಬುದಾರರನ್ನು ಸೇರ್ಪಡೆ ಮಾಡುವ ಕುರಿತು.

ಓದಲಾಗಿದೆ:
1. ಆರ್ಥಿಕ ಇಲಾಖೆ ಭಾರತ ಸರ್ಕಾರ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:I13011/6/2009 Ius-111, ದಿನಾಂಕ:14.12.2012
2. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 25 ಡಿಎಸ್‌ಪಿ 2008, ದಿನಾಂಕ:31.3.2008
3. ಸರ್ಕಾರದ ಆದೇಶ ಸಂಖ್ಯೆ:ಕಂಇ 87 ಎಲ್‌ಇಟಿ 2011, ದಿನಾಂಕ:5.11.2012
4. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 52 ಡಿಎಸ್‌ಪಿ 2012, ದಿನಾಂಕ:18.7.2013

*****

**ಪ್ರಸ್ತಾವನೆ:**

ಭಾರತ ಸರ್ಕಾರವು 45 ವಿವಿಧ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಬಡತನ ರೇಖೆಗಿಂತ ಕೆಳಗಿರುವ ಅಥವಾ ಬಡತನ ರೇಖೆಯ ಅಂಚಿನಲ್ಲಿರುವ ಕುಟುಂಬಗಳಿಗೆ ಜೀವ ವಿಮೆ ಒದಗಿಸುವ ದೃಷ್ಟಿಯಿಂದ ಜನಶ್ರೀ ಬೀಮಾ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಭೂ ರಹಿತ ಕುಟುಂಬಗಳಿಗೆ ಸಂಕಷ್ಟದ ಪರಿಸ್ಥಿತಿಯಲ್ಲಿ ಆರ್ಥಿಕ ನೆರವು ಒದಗಿಸುವ ದೃಷ್ಟಿಯಿಂದ ಆಮ್ ಆದ್ಮಿ ಬೀಮಾ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಎರಡೂ ಯೋಜನೆಗಳಡಿ ಲಾಭಗಳು ಕೆಳಕಂಡಂತಿರುತ್ತದೆ.

1. ವಿಮೆದಾರ ನೈಸರ್ಗಿಕ ಮರಣ ಹೊಂದಿದ ಸಂದರ್ಭದಲ್ಲಿ : ರೂ.30,000/-
2. ವಿಮೆದಾರ ಅಪಘಾತದಿಂದ ಮರಣ ಹೊಂದಿದ ಸಂದರ್ಭದಲ್ಲಿ : ರೂ.75,000/-
3. ವಿಮೆದಾರ ಸಂಪೂರ್ಣ ಅಂಗವಿಕಲನಾದಲ್ಲಿ : ರೂ.75,000/-
4. ವಿಮೆದಾರ ಭಾಗಶಃ ಅಂಗವಿಕಲನಾದಲ್ಲಿ : ರೂ.37,500/-
5. ಕುಟುಂಬದಲ್ಲಿ ಎರಡು ಮಕ್ಕಳಿಗೆ 9ನೇ ತರಗತಿ ಯಿಂದ 12ನೇ ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ರೂ.1200/- ಗಳ ವಿದ್ಯಾರ್ಥಿ ವೇತನ

ವಿಮೆಯ ಪ್ರೀಮಿಯಂ ವೇತನ ಮೊತ್ತವಾದ ರೂ.200/- ನ್ನು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಶೇಕಡಾ 50 ರಷ್ಟು ಭರಿಸಬೇಕಾಗಿರುತ್ತದೆ.

ಮೇಲೆ ಓದಲಾದ, ಉಲ್ಲೇಖ(1) ರನ್ವಯ, ಜನಶ್ರೀ ಬೀಮಾ ಯೋಜನೆ ಹಾಗೂ ಆಮ್ ಆದ್ಮಿ ಬೀಮಾ ಯೋಜನೆಯ ಸ್ವರೂಪ ಹಾಗೂ ಗುಣಲಕ್ಷಣಗಳು ಒಂದೇ ರೀತಿಯಾದುದರಿಂದ ಎರಡೂ ಯೋಜನೆಗಳನ್ನು ವಿಲೀನಗೊಳಿಸಿ "ಆಮ್ ಆದ್ಮಿ ಬೀಮಾ ಯೋಜನೆ" ಹೆಸರಿನಲ್ಲಿ ದಿನಾಂಕ:1.4.2013 ರಿಂದ ಕಂದಾಯ ಇಲಾಖೆಯ ಮುಖಾಂತರ ಅನುಷ್ಠಾನಗೊಳಿಸಲು ಹಾಗೂ ಆಮ್ ಆದ್ಮಿ ಬೀಮಾ ಯೋಜನೆಯಡಿ ಗ್ರಾಮೀಣ ಭೂ ರಹಿತ ಕುಟುಂಬಗಳ ಜೊತೆಗೆ ಭಾರತ ಸರ್ಕಾರ ಮೇಲೆ ಓದಲಾದ ಉಲ್ಲೇಖ(1)ರಂತೆ ವಿವರಿಸಿರುವ ಇತರೇ ಕಸುಬುದಾರರನ್ನು ವಿಮೆಗೆ ಒಳಪಡಿಸಿ ಸರ್ಕಾರ ಉಲ್ಲೇಖ(4) ರಂತೆ ಆದೇಶವನ್ನು ಹೊರಡಿಸಲಾಗಿದೆ.

ಜನಶ್ರೀ ಬೀಮಾ ಯೋಜನೆಯಡಿ ಗುರುತಿಸಿದ ಕೆಲವು 25 ಕಸುಬುದಾರರು ಆಮ್ ಆದ್ಮಿ ಬೀಮಾ ಯೋಜನೆಗೆ ಒಳಪಟ್ಟಿಲ್ಲದಿರುವುದು ಕಂಡುಬಂದಿರುವ ಕಾರಣ, ಉಲ್ಲೇಖ(4) ರಂತೆ ಹೊರಡಿಸಿದ ಆದೇಶದಲ್ಲಿ ವಿವರಿಸಿರುವ ಇತರೇ ಕಸುಬುದಾರರ ಜೊತೆಗೆ ಈಗಾಗಲೇ ಜನಶ್ರೀ ಬೀಮಾ ಯೋಜನೆಯಡಿ ಇದ್ದ 25 ಕಸುಬುದಾರರನ್ನು ಸಹ ವಿಮೆಗೆ ಒಳಪಡಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ:ಆರ್‌ಡಿ 52 ಡಿಎಸ್‌ಪಿ 2012, ಬೆಂಗಳೂರು ದಿನಾಂಕ: 24.02.2014**

ಸರ್ಕಾರವು ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಭಾರತ ಸರ್ಕಾರದ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಿರುವ ಯೋಜನೆಯಾದ ಆಮ್ ಆದ್ಮಿ ಬೀಮಾ ಯೋಜನೆಯಡಿ ಗ್ರಾಮೀಣ ಭೂ ರಹಿತ ಕುಟುಂಬಗಳು ಹಾಗೂ ಉಲ್ಲೇಖ(4)ರ ಸರ್ಕಾರದ ಆದೇಶದಲ್ಲಿ ವಿವರಿಸಿರುವ ವಿವಿಧ 47 ಕಸುಬುದಾರರ ಜೊತೆಗೆ ಕಾರ್ಮಿಕ ಇಲಾಖೆಯ ಜನಶ್ರೀ ಬೀಮಾ ಯೋಜನೆಯಡಿ ಈಗಾಗಲೇ ಇದ್ದ ವಿವಿಧ 25 ಕಸುಬುದಾರರನ್ನು ವಿಮೆಗೆ ಒಳಪಡಿಸಲು ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 52 ಡಿಎಸ್‌ಪಿ 2012, ದಿನಾಂಕ:18.7.2013 ರ ಅನುಬಂಧದ ಕ್ರ.ಸಂ:47 ರ ನಂತರ ಅನುಬಂಧ-1 ರಲ್ಲಿ ಲಗತ್ತಿಸಿರುವ ಇತರೆ 25 ಕಸುಬುದಾರರನ್ನು ವಿಮೆಗೆ ಸೇರ್ಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

24/2/14
(ಎಸ್.ಕಾತ್ಯಾಯನಿ ದೇವಿ)
ಪೀಠಾಧಿಕಾರಿಗಳು,
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ
ನಿರ್ದೇಶನಾಲಯ, ಕಂದಾಯ ಇಲಾಖೆ

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ರವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಂದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) (ಎ ಮತ್ತು ಇ) ಕರ್ನಾಟಕ, ಬೆಂಗಳೂರು
2. ಮುಖ್ಯ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಮಾನ್ಯ ಮುಖ್ಯಮಂತ್ರಿಗಳವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
5. ವಿಭಾಗೀಯ ವ್ಯವಸ್ಥಾಪಕರು, ಭಾರತೀಯ ಜೀವ ವಿಮಾ ನಿಗಮ, ಪಿ&ಜಿಎಸ್ ಯುನಿಟ್, 4ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-02
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾವಿ / ಗುಲ್ಬರ್ಗಾ ವಿಭಾಗ
7. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು
8. ಎಲ್ಲಾ ಜಿಲ್ಲಾಧಿಕಾರಿಗಳು
9. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
10. ಸಂಬಂಧಪಟ್ಟ ಉಪ ವಿಭಾಗಾಧಿಕಾರಿಗಳು / ತಹಶೀಲ್ದಾರರುಗಳಿಗೆ
11. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳಿಗೆ
12. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.